Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 22-12-2022

**ಪತ್ರಿಕಾ ಪ್ರಕಟಣೆ:**

# ಕನ್ನಡ ತಾಂತ್ರಿಕ ಪರಿಭಾಷಾ ವಿಚಾರ ಸಂಕೀರ್ಣ ಮುಕ್ತಾಯ

ಕೇಂದ್ರ ಶಿಕ್ಷಣ ಸಚಿವಾಲಯದ ವೈಜ್ಞಾನಿಕ ತಂತ್ರಜ್ಞಾನ ಮತ್ತು ಪರಿಭಾಷಾ ಆಯೋಗದ ಮಾರ್ಗದರ್ಶನದ ಮೇರೆಗೆ ಕೆ. ಎಲ್. ಎಸ್. ವಿ ಡಿ. ಐ. ಟಿ. ಹಳಿಯಾಳದಲ್ಲಿ ತಾಂತ್ರಿಕ ಶಿಕ್ಷಣದ ಪರಿಭಾಷೆಯನ್ನು ಕನ್ನಡದಲ್ಲಿ ತೆರೆದಿಡುವ ಎರಡು ದಿನದ ವಿಚಾರ ಸಂಕೀರ್ಣ ಕಾರ್ಯಕ್ರಮವು ಡಿಸೆಂಬರ್ 22ರಂದು ಮುಕ್ತಾಯಗೊಂಡಿತು. ಡಿಸೆಂಬರ್ 21ರಂದು ಆರಂಭಗೊಂಡ ಈ ವಿಚಾರ ಸಂಕೀರ್ಣದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಬೆಂಗಳೂರಿನ ಸಂಸ್ಕೃತ ಭಾರತೀಯ ಸಂಕಲನಕಾರರಾದ ಡಾ. ಜನಾರ್ದನ ಹೆಗಡೆ ಅವರು ಭಾರತದಲ್ಲಿರುವ ಪ್ರತಿ ಭಾಷೆಗೂ ಸಂಸ್ಕೃತವೇ ಬುನಾದಿಯಾಗಿದೆ. ಸಂಸ್ಕೃತ ಪದಗಳನ್ನು ಬಹುತೇಕ ಎಲ್ಲಾ ಭಾಷೆಗಳಲ್ಲೂ ಬಳಸಲಾಗುತ್ತಿದೆ ಎಂದು ಹೇಳಿದರು. ಪರಿಭಾಷಾ ಶಬ್ದಕೋಶ ನಿರ್ಮಾಣಕ್ಕೆ ಸಂಸ್ಕೃತ ಅತ್ಯಗತ್ಯ ಎಂದು ನುಡಿದರು. ಕನ್ನಡದಲ್ಲಿ ತಾಂತ್ರಿಕ ಪರಿಭಾಷಾ ಶಬ್ದಕೋಶವು ರಚನೆಯಾದರೆ ಸಾಮಾನ್ಯ ವ್ಯಕ್ತಿಯು ಕೂಡ ಅರ್ಥೈಸಿಕೊಂಡು ಸದುಪಯೋಗ ಪಡೆದುಕೊಳ್ಳಬಹುದು ಮತ್ತು ಭಾಷಾಭಿವೃದ್ಧಿಯು ಸಾಧ್ಯ ಎಂದು ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಪ್ರೊ. ರಿಷಿಕೇಶ ಭಾರ್ಗವ ಹೇಳಿದರು. ಬೆಂಗಳೂರಿನ ಆರ್ ವಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸಹ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ. ಎಸ್. ಸತ್ಯನಾರಾಯಣ ಅವರು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರಾದೇಶಿಕ ಭಾಷೆಯ ಮಹತ್ವವನ್ನು ಉದಾಹರಣೆ ಸಹಿತ ವಿವರಿಸಿದರು.

ವಿಚಾರ ಸಂಕೀರ್ಣದ ಎರಡನೇ ದಿನದ ಅವಧಿಯಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ವಿ. ಎಸ್. ಹೆಗಡೆಯವರು ಮಾತನಾಡುತ್ತಾ ಈ ನೆಲದ ಶಕ್ತಿ ಮತ್ತು ವೈದಿಕ ಶಿಕ್ಷಣದ ಮಹತ್ವವನ್ನು ವಿವರಿಸಿದರು. ಕನ್ನಡದ ಭಾಷಾ ಇತಿಹಾಸ ಮತ್ತು ಸನಾತನ ಸಂಸ್ಕೃತಿಯ ವಿಶ್ಲೇಷಣೆ ನೀಡಿದರು. ಮೈಸೂರಿನ ಸಿ. ಐ. ಐ. ಎಲ್. ನ ಡಾ. ವಿಜಯಲಕ್ಷ್ಮಿ ಪಾಟೀಲ್ ಅವರು ಬೋಧನಾ ಪಠ್ಯಕ್ರಮ ಮತ್ತು ಭಾಷಾ ಮಾಧ್ಯಮಕ್ಕೆ ಒತ್ತುಕೊಡಲು ಕಲಿಕೆಯನ್ನು ಉತ್ತಮಗೊಳಿಸಬೇಕು ಹಾಗೂ ಮಾತೃ ಭಾಷೆಗೆ ಮೊದಲ ಪ್ರಾಶಸ್ತ್ಯ ನೀಡಬೇಕೆಂದು ಹೇಳಿದರು. ಉನ್ನತ ಶಿಕ್ಷಣದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ –2020ನ್ನು ಸಮಗ್ರವಾಗಿ ಅಳವಡಿಸಿಕೊಳ್ಳುವ ಬಗೆಯನ್ನು ಬೆಂಗಳೂರಿನ ಆರ್ ವಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸಹಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಅನಂತರಾಮ ವಿವರಿಸಿದರು. ಮಹಾವಿದ್ಯಾಲಯದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥರಾದ ಡಾ. ಮಹೇಂದ್ರ ದೀಕ್ಷಿತ್ ಅವರು ಕನ್ನಡ ಪರಿಭಾಷಾ ಶಬ್ದಕೋಶ ರಚಿಸಲು ಬೇಕಾಗುವ ಮಾರ್ಗದರ್ಶಿ ಮತ್ತು ಸಲಕರಣೆಗಳ ಕುರಿತು ಬೆಳಕು ಚೆಲ್ಲಿದರು.

ಡಿಸೆಂಬರ್ 22ರ ಮಧ್ಯಾಹ್ನ 3 ಗಂಟೆಗೆ ಜರುಗಿದ ಮುಕ್ತಾಯ ಸಮಾರಂಭದಲ್ಲಿ ಗೌರವಾನ್ವಿತ ಅತಿಥಿಗಳಾಗಿ ಮಾತನಾಡಿದ ಕೇಂದ್ರ ಶಿಕ್ಷಣ ಸಚಿವಾಲಯದ ವೈಜ್ಞಾನಿಕ ತಂತ್ರಜ್ಞಾನ ಮತ್ತು ಪರಿಭಾಷಾ ಆಯೋಗ (ಸಿ. ಎಸ್. ಟಿ. ಟಿ )ದ ಸಹಾಯಕ ನಿರ್ದೇಶಕರಾದ ಡಾ. ಸಂತೋಷ್ ಕುಮಾರ್ ಅವರು ಮುಂದಿನ ದಿನಗಳಲ್ಲಿ ಸಿ. ಎಸ್. ಟಿ. ಟಿ. ಯು ಇಂತಹ ವಿಚಾರ ಸಂಕೀರ್ಣವನ್ನು ಇನ್ನೂ ಹೆಚ್ಚಾಗಿ ಹಮ್ಮಿಕೊಳ್ಳಲಿದೆ, ಈ ಮಹಾವಿದ್ಯಾಲಯವು ವಿಚಾರ ಸಂಕೀರ್ಣವನ್ನು ಸಫಲವಾಗಿ ನಿರ್ವಹಿಸಿದೆ ಎಂದು ಶ್ಲಾಘಿಸಿದರು. ಮುಖ್ಯ ಅತಿಥಿಗಳಾಗಿದ್ದ ಧಾರವಾಡದ ಐ. ಇ. ಐ. ನ ಅಧ್ಯಕ್ಷರಾದ ಶ್ರೀ. ವಿಜಯಕುಮಾರ್ ತೋಟಗೇರ್ ಅವರು ಕನ್ನಡದಲ್ಲಿ ತಾಂತ್ರಿಕ ಶಬ್ದಕೋಶ ರಚನೆಗೆ ಮುಂದಾಗಿರುವ ಸಿ. ಎಸ್. ಟಿ. ಟಿ. ಯ ಕಾರ್ಯಯೋಜನೆಯನ್ನು ಪ್ರಶಂಶಿಸಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಾವಿದ್ಯಾಲಯದ ಆಡಳಿತ ವಿಭಾಗದ ಮುಖ್ಯಸ್ಥರಾದ ಪ್ರೊ. ಮಂಜುನಾಥ ಡಿ ಅವರು ಇಂತಹ ಧನಾತ್ಮಕ ವಿಚಾರ ಸಂಕೀರ್ಣಗಳಿಗೆ ಮಹಾವಿದ್ಯಾಲಯವು ಸದಾ ವೇದಿಕೆಯನ್ನು ಕಲ್ಪಿಸಿ ಕೊಡುವುದೆಂದು ನುಡಿದರು. ಆವಿಷ್ಕಾರ ಪರಿಷತ್ತಿನ ಅಧ್ಯಕ್ಷರು ಹಾಗೂ ವಿಚಾರ ಸಂಕೀರ್ಣದ ಸಂಚಾಲಕರಾದ ಡಾ. ಮಹೇಂದ್ರ ದೀಕ್ಷಿತ್ ಅವರು ಸ್ವಾಗತಿಸಿದರು. ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥರಾದ ಪ್ರೊ. ಎಸ್. ಡಿ. ಕುಲಕರ್ಣಿ ಅವರು ವಂದಿಸಿದರು. ಪ್ರೊ. ಭಾನುಪ್ರಿಯ ನಿರೂಪಿಸಿದರು. ಈ ವಿಚಾರ ಸಂಕೀರ್ಣದಲ್ಲಿ ಭಾಗವಹಿಸಿದ್ದ ವಿವಿಧ ಮಹಾವಿದ್ಯಾಲಯದ 100ಕ್ಕೂ ಅಧಿಕ ಬೋಧಕ ಸಿಬ್ಬಂದಿಗಳಿಗೆ ಇದೇ ಸಂದರ್ಭದಲ್ಲಿ ಪ್ರಮಾಣ ಪತ್ರ ವಿತರಿಸಲಾಯಿತು ಎಂದು ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿ ಅವರು ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal


MINISTRY OF EDUCATION
KLS VDIT HALIYAL
Transforming Through Technology
"TECHNICAL TERMINOLOGY OF ENGINEERING IN KANNADA LANGUAGE WITH REFERENCE TO NEP – 2020"
Sponsored by
Commission for Scientific and Technical Terminology
KLS
VDIT


MINISTRY OF EDUCATION
KLS VDIT HALIYAL
Transforming Through Technology
"TECHNICAL TERMINOLOGY OF ENGINEERING IN KANNADA LANGUAGE WITH REFERENCE TO NEP – 2020"
21 – 12 – 2022 to 22 – 12 – 2022
Sponsored by
www.klsvdit.edu.in
KLS
VDIT